**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು**

**ಸಿ.ಸಿ. ಸಂಖ್ಯೆ 611/2021**

**ದಿನಾಂಕ 02.07.2025**

**ಫಿರ್ಯಾದಿದಾರರು:** ಸರ್ಕಾರದ ಪರ ಹುಣಸೂರು ಗ್ರಾಮಾಂತರ
ಪೊಲೀಸ್ ಠಾಣೆ, ಹುಣಸೂರು, ಮೈಸೂರು ಜಿಲ್ಲೆ.

ವಿರುದ್ಧ,

**ಆರೋಪಿ/ಗಳು ಃ** ಎ 1. ಶಶಿ @ ಶಶಿಕುಮಾರ್
ಬಿನ್ ನಿಂಗರಾಜೇಗೌಡ @ ನಿಂಗರಾಜು ,
ವಯಸ್ಸು ಸುಮಾರು 28 ವರ್ಷಗಳು,
ವಾಸಃ ಹಳ್ಳದ ಮನುಗನಹಳ್ಳಿ ಗ್ರಾಮ,
ಹೆಚ್. ಡಿ. ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

ಎ 2. ಸ್ವಾಮಿ @ ಸ್ವಾಮಿಗೌಡ
ಬಿನ್ ಲೇಟ್. ಶ್ರೀನಿವಾಸಗೌಡ,
ವಯಸ್ಸು ಸುಮಾರು 48 ವರ್ಷಗಳು,
ವಾಸಃ ಚಂದಗಾಲು ಗ್ರಾಮ,
ಕೆ.ಆರ್. ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

ಎ 3. ನಿಂಗರಾಜೇಗೌಡ @ ನಿಂಗರಾಜು
ಬಿನ್ ಲೇಟ್. ಬಸವೇಗೌಡ,

ಎ 4. ಪದ್ಮ @ ಪದ್ಮಮ್ಮ
ಕೋಂ ನಿಂಗರಾಜೇಗೌಡ @ ನಿಂಗರಾಜು
ವಯಸ್ಸು ಸುಮಾರು 48 ವರ್ಷಗಳು,
ಎ 3 ಮತ್ತು 4 ರವರ ವಾಸಃ ಹಳ್ಳದ ಮನುಗನಹಳ್ಳಿ ಗ್ರಾಮ,
ಹೆಚ್. ಡಿ. ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

ಸಿಸಿ ಸಂಖ್ಯೆ : 611/2021

# <u>ದೋಷಾರೋಪಣೆ</u>

**ಶ್ರೀಮತಿ. ಆಯಿಶಾಬಿ .ಪಿ. ಮಜೀದ್, ಬಿ.ಎ., ಎಲ್.ಎಲ್.ಬಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಮೇಲೆ ಹೇಳಿದ ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡಂತೆ ಆಪಾಧಿಸುವುದೇನೆಂದರೆ,

1. ದಿಃ 02.02.2019 ರಂದು ಬೆಳಿಗ್ಗೆ 05.00 ಗಂಟೆ ಸಮಯದಲ್ಲಿ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಉಯಿಗೊಂಡನಹಳ್ಳಿ ಗ್ರಾಮದ ಸರ್ವೆ ನಂ.38/87 ರ ಜಮೀನಲ್ಲಿರುವ ಬಸವೇಶ್ವರ ದೇವಸ್ಥಾನದಲ್ಲಿ 1 ನೇ ಆರೋಪಿಯಾದ ನೀವು ಅಪರಾಧ ಮಾಡುವ ಉದ್ದೇಶವುಳ್ಳವರಾಗಿ ಸಾಕ್ಷಿ-2 ಕು. ಭಾರತಿ ರವರು ಇನ್ನೂ 14 ವರ್ಷ 10 ತಿಂಗಳು ಅಪ್ರಾಪ್ತ ವಯಸ್ಸಿನವಳೆಂದು ಗೊತ್ತಿದ್ದರೂ ಸಹ ನಿಮ್ಮೊಂದಿಗೆ ಬಾಲ್ಯ ವಿವಾಹ ಮಾಡಿಕೊಂಡಿರುತ್ತೀರಿ, ಆ ಮೂಲಕ ಬಾಲ್ಯ ವಿವಾಹ ನಿಷೇದ ಕಾಯ್ದೆ ಕಲಂ 9 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಕೊನೇಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 2 ರಿಂದ 4 ನೇ ಆರೋಪಿಗಳಾದ ನೀವುಗಳು ಅಪರಾಧ ಎಸಗುವ ಉದ್ದೇಶವುಳ್ಳವರಾಗಿ, ಬಾಲ್ಯ ವಿವಾಹ ನಿಷೇದ ಕಾಯ್ದೆ ಜಾರಿಯಲ್ಲಿರುವುದು ಗೊತ್ತಿದ್ದರೂ ಸಹ 1 ನೇ ಆರೋಪಿಯಾದ ನೀವು ಸಾಕ್ಷಿ-2 ಕು. ಭಾರತಿ ರವರ ವಯಸ್ಸು 14 ವರ್ಷ 10 ತಿಂಗಳ ಅಪ್ರಾಪ್ತ ವಯಸ್ಸಿನವಳೆಂದು ಗೊತ್ತಿದ್ದರೂ ಸಹ ಅವರ ಇಚ್ಛೆಗೆ ವಿರದ್ಧವಾಗಿ ಸಾಕ್ಷಿ-2 ರವರಿಗೆ ತಾಳಿ ಕಟ್ಟುವುದರ ಮೂಲಕ ಬಾಲ್ಯ ವಿವಾಹ ಮಾಡಿರುತ್ತೀರಿ, ಆ ಮೂಲಕ ಬಾಲ್ಯ ವಿವಾಹ ನಿಷೇದ ಕಾಯ್ದೆ ಕಲಂ 11 ರ ರೀತ್ಯಾ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು, ಹುಣಸೂರು.

ಆರೋಪಿಗಳ ಸಹಿ ಃ